**All India Radio: Bangalore**
**National Bulletin In Kannada**
**10.08.2025 7.350p.m.**
**ಆಕಾಶವಾಣಿ, ಬೆಂಗಳೂರು**
**ರಾಷ್ಟ್ರೀಯ ವಾರ್ತೆಗಳು**
**10.08.2025 7.35 p.m.**
**<><><><>**

**ಮುಖ್ಯಾಂಶಗಳು :**

೧. ಜಗತ್ತಿನ ಮೂರನೇ ಅತಿದೊಡ್ಡ ಮೆಟ್ರೋ ಜಾಲ ಹೊಂದಿದ ದೇಶ ಭಾರತ - ಪ್ರಧಾನಿ ನರೇಂದ್ರ ಮೋದಿ

೨. ಕರ್ನಾಟಕ ರೈಲ್ವೆ ಅಭಿವೃದ್ಧಿಗೆ ಕೇಂದ್ರ ಸರ್ಕಾರ ಹೆಚ್ಚಿನ ಆಧ್ಯತೆ - ಸಚಿವ ಅಶ್ವಿನಿ ವೈಷ್ಣವ್

೩. ದುರಂತದ ನಂತರ ಸಹಜತೆಯತ್ತ ಮರಳುತ್ತಿರುವ ಉತ್ತರ ಕಾಶಿಯ ಧರಾಲಿ

೪. ಫುಟ್ಬಾಲ್ - ೨೦ರೊಳಗಿನ ಮಹಿಳಾ ಏಷಿಯನ್ ಕಪ್ ೨೦೨೬ರಲ್ಲಿ ಸ್ಥಾನ ಕಾಯ್ದಿರಿಸಿದ ಭಾರತ

**><><><><><><><><><**

ಮೂರನೇ ಹಂತದ ಮೆಟ್ರೋ ರೈಲು ಯೋಜನೆಯೊಂದಿಗೆ ಭಾರತ ಜಗತ್ತಿನ ೩ನೇ ಅತಿದೊಡ್ಡ ಮೆಟ್ರೋ ಜಾಲ ಹೊಂದಿದ ದೇಶವಾಗಿ ಹೊರಹೊಮ್ಮಿದೆ ಎಂದು ಪ್ರಧಾನಿ ನರೇಂದ್ರ ಮೋದಿ ತಿಳಿಸಿದ್ದಾರೆ. ಬೆಂಗಳೂರಿನಲ್ಲಿಂದು ಮೂರನೇ ಹಂತದ ನಮ್ಮ ಮೆಟ್ರೋ ರೈಲು ಯೋಜನೆಗೆ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದ ಅವರು ೨೦೧೪ರ ವರೆಗೆ ದೇಶದ ಕೇವಲ ೫ ನಗರಗಳಲ್ಲಿದ್ದ ಮೆಟ್ರೋ ರೈಲು ಜಾಲ, ಇದೀಗ ೨೪ ನಗರಗಳಿಗೆ ವಿಸ್ತರಿಸಿದೆ. ಆರೋಗ್ಯ ಮತ್ತು ಶಿಕ್ಷಣ ವಲಯದಲ್ಲೂ ದೇಶ ಭಾರೀ ಅಭಿವೃದ್ಧಿ ಕಂಡಿದ್ದು, ಕಳೆದ ೧೧ ವರ್ಷಗಳಲ್ಲಿ ಏಮ್ಸ್ ಆಸ್ಪತ್ರೆಗಳ ಸಂಖ್ಯೆ ೭ ರಿಂದ ೨೨ಕ್ಕೆ ಏರಿಕೆಯಾಗಿದೆ. ವೈದ್ಯಕೀಯ ಕಾಲೇಜುಗಳ ಸಂಖ್ಯೆ ೩೮೭ ರಿಂದ ೭೦೪ಕ್ಕೆ ಏರಿಕೆಯಾಗಿದೆ ಎಂದು ಹೇಳಿದ್ದಾರೆ. ಬೃಹತ್ ಆರ್ಥಿಕತೆಯ ರಾಷ್ಟ್ರಗಳ ಪಟ್ಟಿಯಲ್ಲಿ ಭಾರತ ೧೧ರಿಂದ ೪ನೇ ಸ್ಥಾನಕ್ಕೆ ಏರಿದ್ದು, ಶೀಘ್ರವೇ ಮೂರನೇ ಸ್ಥಾನಕ್ಕೆ ಮುನ್ನಡೆಯಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

**ಧ್ವನಿ - ಪ್ರಧಾನಿ ನರೇಂದ್ರ ಮೋದಿ ( 30 ಸೆಕೆಂಡುಗಳು)**

ಕಳೆದ ೧೧ ವರ್ಷಗಳಲ್ಲಿ ಬಡವರಿಗಾಗಿ ೪ ಕೋಟಿಗೂ ಹೆಚ್ಚು ಮನೆಗಳನ್ನು ಹಸ್ತಾಂತರಿಸಲಾಗಿದ್ದು, ಇನ್ನೂ ೩ ಕೋಟಿ ಮನೆಗಳ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದೆ. ೨೦೨೧೪ಕ್ಕೆ ಮುನ್ನ ಭಾರತದ ಒಟ್ಟು ರಫ್ತು ಮೌಲ್ಯ ೪೬೮ ಶತಕೋಟಿ ಡಾಲರ್‌ನಷ್ಟಿದ್ದು, ಇದೀಗ ೮೨೪ ಶತಕೋಟಿ ಡಾಲರ್‌ಗೆ ಏರಿಕೆಯಾಗಿದೆ. ಮೊಬೈಲ್ ಫೋನ್ ರಫ್ತಿನಲ್ಲಿ ಭಾರತ ಜಾಗತಿಕ ಅಗ್ರ ೫ ರಾಷ್ಟ್ರಗಳ ಪಟ್ಟಿಯಲ್ಲಿದೆ. ಆಟೋಮೊಬೈಲ್ ವಲಯದ ರಫ್ತು ೨ ಪಟ್ಟು ಹೆಚ್ಚಳವಾಗಿದ್ದು, ಈ ವಲಯದಲ್ಲಿ ಭಾರತ ಜಾಗತಿಕವಾಗಿ ನಾಲ್ಕನೇ ಸ್ಥಾನಕ್ಕೆ ಏರಿದೆ ಎಂದು ತಿಳಿಸಿದ್ದಾರೆ. ಇದಕ್ಕೂ ಮೊದಲು ಬೆಂಗಳೂರಿನ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣದಲ್ಲಿ ಪ್ರಧಾನಿ ಬೆಂಗಳೂರು-ಬೆಳಗಾವಿ ವಂದೇ ಭಾರತ್ ರೈಲು ಸೇರಿದಂತೆ ಮೂರು ವಂದೇ ಭಾರತ್ ರೈಲುಗಳಿಗೆ ಹಸಿರು ನಿಶಾನೆ ತೋರಿದರು. ಇದೇ ಸಂದರ್ಭದಲ್ಲಿ ಅಮೃತ್‌ಸರ್-ಶ್ರೀ ಮಾತಾ ವೈಷ್ಣೋದೇವಿ ಕತ್ರಾ ಹಾಗೂ ನಾಗ್ಪುರ್-ಪುಣೆ ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲುಗಳಿಗೂ ವರ್ಚುವಲ್ ಮೂಲಕ ಚಾಲನೆ ನೀಡಿದರು. ಬಳಿಕ ಪ್ರಧಾನಿ ನಮ್ಮ ಮೆಟ್ರೋ ಹಳದಿ ರೈಲು ಮಾರ್ಗಕ್ಕೆ ರಾಗಿಗುಡ್ಡ ನಿಲ್ದಾಣದಲ್ಲಿ ಹಸಿರು ನಿಶಾನೆ ತೋರಿದರು. ಮೆಟ್ರೋ ನಿಲ್ದಾಣದಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡುವ ಮೂಲಕ ಟಿಕೆಟ್ ಖರೀದಿಸಿ ಪ್ರಯಾಣಿಸಿದರು. ಈ ಸಂದರ್ಭದಲ್ಲಿ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಕೇಂದ್ರ ಸಚಿವರಾದ ಮನೋಹರ್ ಲಾಲ್ ಕಟ್ಟರ್, ಅಶ್ವಿನಿ

ವೈಷ್ಣವ್, ಶೋಭಾ ಕರಂದ್ಲಾಜೆ, ಹೆಚ್.ಡಿ. ಕುಮಾರಸ್ವಾಮಿ, ವಿ. ಸೋಮಣ್ಣ, ಸಂಸದರಾದ ತೇಜಸ್ವಿ ಸೂರ್ಯ, ಡಾ. ಸಿ.ಎನ್. ಮಂಜುನಾಥ್, ಸಚಿವ ಬೈರತಿ ಸುರೇಶ್ ಇನ್ನಿತರರು ಉಪಸ್ಥಿತರಿದ್ದರು.

><><><><><><><><><

ಭಾರತದ ಮಾಜಿ ರಾಷ್ಟ್ರಪತಿ ವಿ ವಿ ಗಿರಿ ಅವರ ಜಯಂತಿಯಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ರಾಷ್ಟ್ರಪತಿ ಭವನದಲ್ಲಿ ಅವರಿಗೆ ಪುಷ್ಪ ನಮನ ಸಲ್ಲಿಸಿದರು. ವಿ ವಿ ಗಿರಿ ಭಾರತದ ೪ ನೇ ರಾಷ್ಟ್ರಪತಿಯಾಗಿದ್ದರು.

><><><><><><><><><

ಎಲೆಕ್ಟ್ರಾನಿಕ್ ವಲಯದಲ್ಲಿ ದೇಶದ ಚಿತ್ರಣ ಭಾರೀ ಬದಲಾವಣೆ ಕಂಡಿದ್ದು, ಸೆಮಿಕಂಡಕ್ಟರ್ ತಯಾರಿಕೆಯ ೬ ಘಟಕಗಳು ನಿರ್ಮಾಣಹಂತದಲ್ಲಿವೆ. ಶೀಘ್ರವೇ ದೇಶದ ಪ್ರಥಮ ಚಿಪ್ ತಯಾರಾಗಲಿದೆ. ಕಳೆದ ೧೧ ವರ್ಷಗಳಲ್ಲಿ ಎಲೆಕ್ಟ್ರಾನಿಕ್ ರಫ್ತು ಪ್ರಮಾಣ ೮ ಪಟ್ಟು ಹೆಚ್ಚಳವಾಗಿದ್ದು, ರಫ್ತು ಮೌಲ್ಯ ೩ ಲಕ್ಷ ಕೋಟಿ ರೂಪಾಯಿ ದಾಟಿದೆ ಎಂದು ಕೇಂದ್ರ ರೈಲ್ವೆ, ಸಮಾಚಾರ ಮತ್ತು ಪ್ರಸಾರ ಸಚಿವ ಅಶ್ವಿನಿ ವೈಷ್ಣವ್ ಹೇಳಿದರು. ಬೆಂಗಳೂರಿನಲ್ಲಿಂದು ಮೆಟ್ರೋ ರೈಲ್ವೆ ೩ನೇ ಹಂತದ ಯೋಜನೆಗೆ ಶಿಲನ್ಯಾಸ ಸೇರಿದಂತೆ ವಿವಿಧ ಅಭಿವೃದ್ಧಿ ಕಾರ್ಯಕ್ರಮದ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಅವರು, ಬೆಂಗಳೂರು ಸಮೀಪದ ದೇವನಹಳ್ಳಿಯಲ್ಲಿ ಸ್ಮಾರ್ಟ್‌ಫೋನ್ ತಯಾರಿಕೆಯ ಪ್ರಮುಖ ಘಟಕ ನಿರ್ಮಾಣಗೊಂಡಿದ್ದು, ಭಾರತ ಜಗತ್ತಿನ ೨ನೇ ಅತಿದೊಡ್ಡ ಮೊಬೈಲ್ ಫೋನ್ ರಫ್ತುದಾರ ರಾಷ್ಟ್ರವಾಗಿ ಹೊರಹೊಮ್ಮಿದೆ ಎಂದರು.  ಕರ್ನಾಟಕದ ರೈಲ್ವೆ ಅಭಿವೃದ್ಧಿಗೆ ಕೇಂದ್ರ ಹೆಚ್ಚಿನ ಆದ್ಯತೆ ನೀಡಿದೆ ಎಂದರು. ೨೦೧೪ರ ಬಜೆಟ್‌ನಲ್ಲಿ ಕರ್ನಾಟಕದ ರೈಲ್ವೆ ವಲಯಕ್ಕೆ ೮೩೫ ಕೋಟಿ ರೂಪಾಯಿ ಒದಗಿಸಿದ್ದರೆ, ಈ ಸಾಲಿನ ಬಜೆಟ್‌ನಲ್ಲಿ ೭ ಸಾವಿರದ ೫೦೦ ಕೋಟಿ ರೂಪಾಯಿಗಿಂತಲೂ ಹೆಚ್ಚಿನ ಅನುದಾನ ಒದಗಿಸಲಾಗಿದೆ. ಪ್ರಸ್ತುತ ರಾಜ್ಯದಲ್ಲಿ ೫೪ ಸಾವಿರ ಕೋಟಿ ರೂಪಾಯಿಗೂ ಹೆಚ್ಚು ಮೌಲ್ಯದ ವಿವಿಧ ಕಾಮಗಾರಿಗಳು ಪ್ರಗತಿಯಲ್ಲಿವೆ ಎಂದು ಸಚಿವ ಅಶ್ವಿನಿ ವೈಷ್ಣವ್ ತಿಳಿಸಿದರು.

**ಧ್ವನಿ : ಅಶ್ವಿನಿ ವೈಷ್ಣವ್, ರೈಲ್ವೆ ಸಚಿವ (    33 ಸೆಕೆಂಡುಗಳು)**

ಅಮೃತ್ ಭಾರತ್ ಯೋಜನೆಯಡಿ ಕರ್ನಾಟಕದ ೬೧ ರೈಲು ನಿಲ್ದಾಣಗಳನ್ನು ಅಧುನೀಕರಣಗೊಳಿಸಲಾಗುತ್ತಿದ್ದು, ೧೨೪ ಮೇಲ್ಸೇತುವೆ ಮತ್ತು ಕೆಳಸೇತುವೆ ಕಾಮಗಾರಿ ಪ್ರಗತಿಯಲ್ಲಿದೆ ಎಂದು ತಿಳಿಸಿದರು. ಕಳೆದ ೧೧ ವರ್ಷದಲ್ಲಿ ದೇಶದಲ್ಲಿ ೩೫ ಸಾವಿರ ಕಿಲೋ ಮೀಟರ್‌ಗಿಂತಲೂ ಹೆಚ್ಚು ರೈಲು ಮಾರ್ಗ ನಿರ್ಮಿಸಲಾಗಿದ್ದು, ಎಲ್ಲಾ ಮಾರ್ಗಗಳನ್ನು ವಿದ್ಯುದ್ದೀಕರಣಗೊಳಿಸಲಾಗಿದೆ. ದೇಶದ ಒಂದು ಸಾವಿರದ ೩೦೦ ನಿಲ್ದಾಣಗಳನ್ನು ಅಧುನೀಕರಣಗೊಳಿಸಲಾಗುತ್ತಿದೆ ಎಂದು ಸಚಿವರು ವಿವರಿಸಿದರು.  ಜಗತ್ತಿನ ಬೃಹತ್ ರೈಲು ನಿಲ್ದಾಣ ಭಾರತದಲ್ಲಿ ಅಭಿವೃದ್ಧಿಯಾಗುತ್ತಿದ್ದು, ನೂತನ ತಲೆಮಾರಿನ ವಂದೇ ಭಾರತ್ ಮತ್ತು ಅಮೃತ್ ಭಾರತ್ ರೈಲುಗಳು ಸಂಚರಿಸುತ್ತಿವೆ. ಬುಲೆಟ್ ರೈಲು ಯೋಜನೆ ಪ್ರಗತಿಯಲ್ಲಿದೆ ಎಂದು ಸಚಿವ ಅಶ್ವಿನಿ ವೈಷ್ಣವ್ ಹೇಳಿದ್ದಾರೆ.

><><><><><><><><><

ಉತ್ತರಕಾಶಿ ಜಿಲ್ಲೆಯ ಹರ್ಸಿಲ್ ಮತ್ತು ಧರಾಲಿ ಪ್ರದೇಶಗಳಲ್ಲಿ ಇತ್ತೀಚೆಗೆ ಸಂಭವಿಸಿದ ದುರಂತದ ನಂತರ, ದೊಡ್ಡ ಪ್ರಮಾಣದ ಪರಿಹಾರ ಮತ್ತು ರಕ್ಷಣಾ ಕಾರ್ಯಾಚರಣೆಗಳು ನಡೆಯುತ್ತಿವೆ.  ಲಿಮ್ಚಿಗಡ್‌ನಲ್ಲಿ ೯೦ ಅಡಿ ಎತ್ತರದ ಬೈಲಿ ಸೇತುವೆಯ ನಿರ್ಮಾಣವು ಪೂರ್ಣಗೊಳ್ಳುವ ಹಂತದಲ್ಲಿದೆ, ಅಲ್ಲಿ ಒಂದು ಪ್ರಮುಖ ಸೇತುವೆ ಕೊಚ್ಚಿಹೋಗಿದೆ. ಸಂಪರ್ಕವನ್ನು ಪುನಃಸ್ಥಾಪಿಸಲು ಗಡಿ ರಸ್ತೆಗಳ ಸಂಸ್ಥೆ ಮತ್ತು ಸೇನಾ ಎಂಜಿನಿಯರ್‌ಗಳು ನಿರಂತರವಾಗಿ ಶ್ರಮಿಸುತ್ತಿದ್ದಾರೆ. ಹರ್ಸಿಲ್ ಕಣಿವೆಯಲ್ಲಿ ವಿದ್ಯುತ್ ಸರಬರಾಜು ಪುನಃಸ್ಥಾಪನೆಯಾಗಿದೆ. ಹರ್ಸಿಲ್ ಮತ್ತು ಧರಾಲಿಗೆ ನಿಯಮಿತವಾಗಿ ಡೀಸೆಲ್ ಮತ್ತು ಅಡುಗೆ ಅನಿಲ ಪೂರೈಕೆಯನ್ನು ಖಚಿತಪಡಿಸಿಕೊಳ್ಳಲಾಗಿದೆ, ಆದರೆ ರಸ್ತೆ ತಡೆಗಳಿಂದಾಗಿ

ಆಹಾರ ಸರಬರಾಜುಗಳನ್ನು ಹೇಸರಗತ್ತೆಗಳ ಮೂಲಕ ಸಾಗಿಸಲಾಗುತ್ತಿದೆ. ಆಗಸ್ಟ್ ೫ ರಂದು ಸಂಭವಿಸಿದ ವಿನಾಶಕಾರಿ ದುರಂತದ ನಂತರ, ೧,೧೦೦ ಕ್ಕೂ ಹೆಚ್ಚು ಜನರನ್ನು ಸುರಕ್ಷಿತವಾಗಿ ರಕ್ಷಿಸಲಾಗಿದೆ. ಅವರಲ್ಲಿ, ೪೮೦ ಜನರನ್ನು ನಿನ್ನೆ ಹರ್ಸಿಲ್ ಮತ್ತು ನೆಲಾಂಗ್‌ನಿಂದ ಸ್ಥಳಾಂತರಿಸಲಾಯಿತು ಮತ್ತು ಜಾಲಿ ಗ್ರಾಂಟ್, ಮಟ್ಲಿ ಮತ್ತು ಚಿನ್ಯಾಲಿಸೌರ್‌ಗೆ ಸ್ಥಳಾಂತರಿಸಲಾಯಿತು. ರಕ್ಷಣಾ ಕಾರ್ಯಗಳಲ್ಲಿ ಸಹಾಯ ಮಾಡಲು ಉತ್ತರಾಖಂಡ ನಾಗರಿಕ ವಿಮಾನಯಾನ ಅಭಿವೃದ್ಧಿ ಪ್ರಾಧಿಕಾರ ಮತ್ತು ಭಾರತೀಯ ಸೇನೆಯ ಹೆಲಿಕಾಪ್ಟರ್‌ಗಳನ್ನು ಬಳಸಿಕೊಳ್ಳಲಾಗಿದೆ. ಉತ್ತರಾಖಂಡ ಮುಖ್ಯ ಕಾರ್ಯದರ್ಶಿ ಆನಂದ್ ಬರ್ಧನ್ ಅವರು ಎಲ್ಲಾ ಸಂಸ್ಥೆಗಳು ನಿಕಟ ಸಮನ್ವಯದಿಂದ ಕೆಲಸ ಮಾಡಲು ಮತ್ತು ಪೀಡಿತ ಪ್ರದೇಶಗಳನ್ನು ವಲಯಗಳಾಗಿ ವಿಂಗಡಿಸಲು ಸೂಚಿಸಿದ್ದಾರೆ. ನಡೆಯುತ್ತಿರುವ ಕಾರ್ಯಾಚರಣೆಗಳಿಗೆ ಎಸ್‌ಡಿಆರ್‌ಎಫ್‌ನ ಇನ್ಸ್‌ಪೆಕ್ಟರ್ ಜನರಲ್ ಅರುಣ್ ಮೋಹನ್ ಜೋಶಿ ಅವರನ್ನು ನೋಡಲ್ ಅಧಿಕಾರಿಯಾಗಿ ನೇಮಿಸಲಾಗಿದೆ. ಹೆಚ್ಚುವರಿಯಾಗಿ, ನಡೆಯುತ್ತಿರುವ ಶೋಧ ಕಾರ್ಯಾಚರಣೆಗಳನ್ನು ತೀವ್ರಗೊಳಿಸಲು ಜಲ ಪೊಲೀಸರಿಗಾಗಿ ಧರಾಲಿಗೆ ದೋಣಿಗಳನ್ನು ಕಳುಹಿಸಲು ಆದೇಶಗಳನ್ನು ನೀಡಲಾಗಿದೆ. ವಿಪತ್ತಿನ ಕಾರಣಗಳನ್ನು ತನಿಖೆ ಮಾಡಲು ಭೂವಿಜ್ಞಾನಿಗಳ ತಂಡಗಳನ್ನು ಉತ್ತರಕಾಶಿ ಮತ್ತು ಪೌರಿ ಜಿಲ್ಲೆಗಳಿಗೆ ಕಳುಹಿಸಲಾಗಿದ್ದು, ಒಂದು ವಾರದೊಳಗೆ ಅವರು ತಮ್ಮ ವರದಿಯನ್ನು ಸಲ್ಲಿಸುವ ನಿರೀಕ್ಷೆಯಿದೆ.

><><><><><><><><><

ಹಿಮಾಲಯ ಪ್ರದೇಶದ ಪಶ್ಚಿಮ ಬಂಗಾಳ, ಅಸ್ಸಾಂ, ಸಿಕ್ಕಿಂ, ಬಿಹಾರ, ಮೇಘಾಲಯ ಮತ್ತು ಅರುಣಾಚಲ ಪ್ರದೇಶಗಳಲ್ಲಿ ಮುಂದಿನ ೬ ರಿಂದ ೭ ದಿನಗಳವರೆಗೆ ಭಾರಿ ಮಳೆಯ ನಿರೀಕ್ಷೆ ಇದೆ ಎಂದು ಭಾರತ ಹವಾಮಾನ ಇಲಾಖೆ ತಿಳಿಸಿದೆ. ಈ ಪರಿಸ್ಥಿತಿ ಮುಂದಿನ ೭ ದಿನಗಳವರೆಗೆ ಉತ್ತರಾಖಂಡ ಮತ್ತು ಹಿಮಾಚಲ ಪ್ರದೇಶಗಳಲ್ಲಿ ಮುಂದುವರಿಯಬಹುದು. ಇಂದು ಉತ್ತರ ಮತ್ತು ಮಧ್ಯ ಭಾರತದಲ್ಲಿ, ಹರಿಯಾಣ, ಚಂಡೀಗಢ, ದೆಹಲಿ, ಪಂಜಾಬ್, ಉತ್ತರ ಪ್ರದೇಶ ಹಾಗೂ ಪಶ್ಚಿಮ ಮಧ್ಯ ಪ್ರದೇಶಗಳಲ್ಲಿ ಭಾರಿ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಕರಾವಳಿ ಆಂಧ್ರಪ್ರದೇಶ, ತಮಿಳುನಾಡು, ಪುದುಚೇರಿ, ಕಾರೈಕಲ್, ತೆಲಂಗಾಣ, ನಾಗಾಲ್ಯಾಂಡ್, ಮಣಿಪುರ, ಮಿಜೋರಂ ಮತ್ತು ತ್ರಿಪುರದಲ್ಲಿಯೂ ಇದೇ ಪರಿಸ್ಥಿತಿಗಳು ಇಂದು ಮುಂದುವರೆಯಲಿದೆ ಎಂದು ಹವಾಮಾನ ಇಲಾಖೆ ಹೇಳಿದೆ.

><><><><><><><><><

ಭಾರತದ ೨೦ರ ಒಳಗಿನ ಮಹಿಳಾ ಫುಟ್ಬಾಲ್ ತಂಡ ಇಂದು ಯಾಂಗೋನ್‌ನಲ್ಲಿ ಆತಿಥೇಯ ಮ್ಯಾನ್ಮಾರ್ ವಿರುದ್ಧ ೧-೦ ಅಂತರದ ಜಯದೊಂದಿಗೆ ಏಷಿಯನ್ ಫುಟ್ಬಾಲ್ ಫೆಡರೇಷನ್ ನ ೨೦ರೊಳಗಿನ ಮಹಿಳಾ ಏಷ್ಯನ್ ಕಪ್ ೨೦೨೬ ರಲ್ಲಿ ತಮ್ಮ ಸ್ಥಾನವನ್ನು ಕಾಯ್ದಿರಿಸಿದೆ. ಥೈಲ್ಯಾಂಡ್‌ನಲ್ಲಿ ನಡೆಯಲಿರುವ ಏಷ್ಯನ್ ಕಪ್ ೨೦೨೬ ರಲ್ಲಿ ಭಾರತದ ಸ್ಥಾನವನ್ನು ಕಾಯ್ದಿರಿಸಲು ೨೦ ವರ್ಷಗಳ ಕಾಯುವಿಕೆ ಈ ಮೂಲಕ ಕೊನೆಗೊಂಡಿದೆ.

><><><><><><><><><